5

# ಉತ್ತಮವಾದ ಒಂದು ಒಡಂಬಡಿಕೆ

# (7:11-8:13)

ಉತ್ತಮವಾದ ಅಂಶಗಳ ಕುರಿತು ನಾವುಗಳು ಕುತೂಹಲ ಹೊಂದಿದ್ದೇವೆ. ಕೆಲವರಿಗೆ ಉತ್ತಮವಾದ ಕೆಲಸಗಳು, ಉತ್ತಮವಾದ ಮನೆಗಳು ಅಥವಾ ಉತ್ತಮ ವಾದ ವಸ್ತ್ರಗಳನ್ನು ಬಯಸುತ್ತಾರೆ. ನಾವುಗಳು ಎಲ್ಲವುಗಳಲ್ಲಿ ಉತ್ತಮವಾದವುಗಳನ್ನೇ ಬಯಸುವದರಿಂದ, ಇಬ್ರಿಯ 8ರಲ್ಲಿರುವ ವಿಚಾರಗಳನ್ನು ಪರಿಗಣಿಸಬೇಕು.

> ಆದರೆ ಯೇಸು ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗವನ್ನು ಹೊಂದಿದವನಾಗಿದ್ದಾನೆ; ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ (ಇಬ್ರಿಯ 8:6).

ಯೇಸು "ಅತ್ಯುತ್ತಮವಾದ" ಹಾಗೂ ಶ್ರೇಷ್ಟವಾದ ಸೇವೆಯನ್ನು ಹೊಂದಿದ್ದಾನೆ. ಆತನ ನಿಮಿತ್ತವಾಗಿ ನಾವುಗಳು ಶ್ರೇಷ್ಟವಾದ ಒಡಂಬಡಿಕೆಯನ್ನು ಹೊಂದಿದ್ದೇವೆ, ಅದರಲ್ಲಿ ಉತ್ತಮ ವಾದ ವಾಗ್ದಾನಗಳು ಅಡಕವಾಗಿವೆ.

ಇಬ್ರಿಯ 8ರಲ್ಲಿರುವ ಮುಖ್ಯಪದವನ್ನು, ಇಬ್ರಿಯ ಪುಸ್ತಕದ ಪ್ರಮುಖ ಅಂಶವಾಗಿ ಚಿತ್ತರಿಸಲಾಗಿದೆ. ಮೋಶೆಯ ನಿಯಮಾವಳಿಗಿಂತಲೂ, ಕ್ರಿಸ್ತನ ಕುರಿತಾದ ಸಕಲ ವಿಷಯಗಳು ಉತ್ತಮವಾಗಿವೆ. ಇಬ್ರಿಯ ಸಂದೇಶವೇನೆಂದರೆ, ಹೊಸ ಒಡಂಬಡಿಕೆಯು ಉತ್ತಮವಾದ ಒಪ್ಪಂದವನ್ನು ಹೊಂದಿರುತ್ತದೆ ಎಂಬದೆ. ಈ ಹೇಳಿಕೆಯ ಅರ್ಥವೇನು, ಇದರಿಂದ ನಮಗೇನು ಪ್ರಯೋಜನ?

## ಉತ್ತಮವಾದ ಒಡಂಬಡಿಕೆಯನ್ನು ಹೊಂದಿದ್ದೇವೆ ಎಂಬುದರ ಅರ್ಥವೇನು?

**ಅದರ ಅರ್ಥ ಏನಾಗಿರುವದಿಲ್ಲ**

ಹೊಸ ಒಡಂಬಡಿಕೆಯು ಉತ್ತಮವಾದದ್ದು ಎಂದು ಹೇಳುವಾಗ, ಅದರ ಅರ್ಥ ಏನಾಗಿರುವದಿಲ್ಲ ಎಂಬುದಾಗಿಯೂ ತಿಳಿಯಬೇಕು.

*ಅದು ಒಂದು ಕೆಟ್ಟ ನಿಯಮವಾಗಿರುವದಿಲ್ಲ.* ಹೊಸ ಒಡಂಬಡಿಕೆಯು ಉತ್ತಮವೇ ಆಗಿದ್ದರೂ, ಹಳೆ ಒಡಂಬಡಿಕೆಯು ಕೆಟ್ಟದ್ದಾಗಿರುವದಿಲ್ಲ. "ಒಳ್ಳೆಯದು" ಎಂಬುದಕ್ಕೆ "ಉತ್ತಮ" ಎಂಬದು ಸಮನಾದ ಪದವಾಗಿದೆ. ಹೊಸ ಒಡಂಬಡಿಕೆಯು ಉತ್ತಮವಾಗಿದ್ದರೆ, ಹಳೆ ಒಡಂಬಡಿಕೆಯು ಒಳ್ಳೆಯದೇ ಆಗಿರುತ್ತದೆ. ಪೌಲನು ತಿಳಿಸಿರುವಂತೆ, ಧರ್ಮಶಾಸ್ತ್ರವು ಪರಿಶುದ್ಧವಾದದ್ದು ಮತ್ತು ಆಜ್ಞೆಯು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿದೆ (ರೋಮಾಪುರ 7:12). ಆದರಿಂದ ಹಳೆಯ ನಿಯಮವು ಕೆಟ್ಟದಾಗಿರದೆ, ಒಳ್ಳೆಯದೇ ಆಗಿರುತ್ತದೆ.

*ಅದು ದೇವರಿಂದ ನೀಡಲ್ಪಟ್ಟಿದೆ.* ಹೊಸ ಒಡಂಬಡಿಕೆಯು ಉತ್ತಮವಾಗಿರುವದರಿಂದ, ಹಳೆ ಒಡಂಬಡಿಕೆಯನ್ನು ದೇವರು ನೀಡಿರುವದಿಲ್ಲ ಎಂಬ ಅರ್ಥವಲ್ಲ (ವಿಮೋಚನಕಾಂಡ 20). ಹಳೆ ಒಡಂಬಡಿಕೆಯ ಕರ್ತೃ ದೇವರೇ ಆಗಿದ್ದು, ದೈವೀಕ ಪ್ರಕಟನೆಯಿಂದ ಅದನ್ನು ನೀಡಲಾಗಿದೆ.

*ಪ್ರಚಲಿತವಾದ ನಿಯಮಗಳಿಗಿಂತಲೂ ಉತ್ತಮವಾಗಿದೆ.* ಹೊಸ ಒಡಂಬಡಿಕೆಯು

ಉತ್ತಮ ಎಂದು ಹೇಳುವಾಗ, ಹಳೆ ಒಡಂಬಡಿಕೆಯ ದಿನಗಳಲ್ಲಿ ಪ್ರಚಲಿತವಾಗಿದ್ದ ನಿಯಮಗಳಿಗಿಂತ, ಹಳೆ ನಿಯಮಗಳು ಉತ್ತಮ ಎಂದು ಹೇಳುತ್ತಿರುವದಿಲ್ಲ. ಆಗಿನ ಕಾಲದಲ್ಲಿ ಇದ್ದ ನಿಯಮಗಳು, ಮೊಶೆಯ ದಿವಸಗಳಿಗಿಂತಲೂ ಹಳೆಯದಾಗಿದ್ದವು. ಅವುಗಳು ಸಹ ಹಳೆ ನಿಯಮಗಳ ಪ್ರಕಾರವೇ ಇದ್ದವು. ಹೇಗೂ, ಮೋಶೆಯ ಧರ್ಮಶಾಸ್ತ್ರವು, ಆ ದಿನಗಳಲ್ಲಿ ಪ್ರಚಲಿತವಾಗಿದ್ದ ಕಾನೂನುಗಳಿಗಿಂತ ಉತ್ತಮವಾಗಿದ್ದವು.

*ಅದು ತನ್ನ ಉದ್ದೇಶವನ್ನು ನೆರವೇರಿಸಿತ್ತು.* ಹೊಸ ಒಡಂಬಡಿಕೆಯು ಉತ್ತಮ ಎಂದು ಹೇಳುವಾಗ, ಹಳೆ ಒಡಂಬಡಿಕೆಯು ತನ್ನ ಉದ್ದೇಶವನ್ನು ಈಡೇರಿಸಲ್ಲ ಎಂದು ಹೇಳಲಾಗದು. ಮೋಶೆಯ ಧರ್ಮಶಾಸ್ತ್ರವು ಒಂದು ಉದ್ದೇಶವನ್ನು ಹೊಂದಿತ್ತು. ಪೌಲನು ಅದನ್ನು, “ಕಾಯುವ ಆಳು” ಎಂದಿರುವನು (ಗಲಾತ್ಯ 3:24) - ಈ ವಿಧದ ಉದ್ದೇಶವನ್ನು ಅದು ಈಡೇರಿಸಿತು. ಪೌಲನು ಮುಂದುವರೆದು, “ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈ ಕೆಳಗಿರುವವರಲ್ಲ” (ಗಲಾತ್ಯ 3:25).

*ಅದು ಕೀಳುದರ್ಜೆಯ ನಿಯಮವಲ್ಲ.* ಹೊಸ ಒಡಂಬಡಿಕೆಯು ಉತ್ತಮ ಎಂದು ಹೇಳುವಲ್ಲಿ, ಹಳೆ ಒಡಂಬಡಿಕೆಯು ಹೊಸದಕ್ಕಿಂತ ಕೀಳು ಮಟ್ಟದ್ದು ಎಂಬ ಅರ್ಥವಲ್ಲ. ಹೊಸದಕ್ಕಿಂತಲೂ, ಹಳೆಯದರಲ್ಲಿ ಕೆಲವು ನೈತಿಕ ತೊಡಕುಗಳು ಇರುತ್ತವೆ. ಹೊಸ ಒಡಂಬಡಿಕೆಯ ಈ ವಿಷಯಗಳನ್ನು ತಿಳಿಸುವಾಗ, ಕೆಲವು ಸಾರಿ ಅಪಾರ್ಥವೂ ಉಂಟಾಗುವ ಸಾಧ್ಯತೆಯಿದೆ. ಉದಾಹರಣೆ. “ಮತ್ತೊಬ್ಬನದನ್ನು ಆಶಿಸಬಾರದು” ಎಂಬ ಹಳೆಯ ನಿಯಮದ ಕುರಿತು (ವಿಮೋಚಕಕಾಂಡ 20:17).[1] ಮತ್ತಾಯ 5ರಲ್ಲಿ, ಯೇಸು ಈ ಮಾತನ್ನು ಹೇಳಿದ್ದಾಗ್ಯೂ, ಮೋಶೆಯ ಬೋಧನೆಯ ಸಂಗಡ ಯಾವುದೇ ವ್ಯತ್ಯಾಸವನ್ನು ತೋರಿರುವದಿಲ್ಲ, ಆದರೆ ಆ ದಿನದ ಬೋಧಕರುಗಳ ಬೋಧನೆಯ ಬಗ್ಗೆ ಯೇಸು ವಿಭಿನ್ನತೆಯನ್ನು ತೋರಿದನು.

**ಇದರ ಅರ್ಥವೇನು**

ಇದು ಉತ್ತಮವಾದ ಒಡಂಬಡಿಕೆ ಎಂದು ಹೇಳುವಾಗ, ಇಬ್ರಿಯರಲ್ಲಿ ಬರೆಯಲಾಗಿರುವ ಸಕಲ ಉತ್ತಮ ಸಂಗತಿಗಳ ಬಗ್ಗೆ ಆಲೋಚಿಸಿರಿ.

*ಉತ್ತಮವಾದ ಮಹಾಯಾಜಕ.* ಕ್ರೈಸ್ತ ಯುಗದಲ್ಲಿ ಉತ್ತಮವಾದ ಯಾಜಕರನ್ನು ಹೊಂದಿರುತ್ತೇವೆ. ಅದನ್ನು ಇಬ್ರಿಯ 8ರ ಆಧಿ ಭಾಗದಲ್ಲಿ ತಿಳಿಸಲಾಗಿದೆ. ಕ್ರಿಸ್ತ ಯೇಸುವಿನಲ್ಲಿ, “ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಅಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ” (8:1). ಆತನು ಹಳೆ ಒಡಂಬಡಿಕೆಯ ಯಾಜಕನಿಗಿಂತಲೂ ವಿಭಿನ್ನವಾಗಿರವನು (8:1-5). “ಆತನು ಶ್ರೇಷ್ಟವಾದ ಯಾಜಕೋದ್ಯೋಗವನ್ನು ಹೊಂದಿದ್ದಾನೆ” (8:6). ಆದ್ದರಿಂದ ಆತನು ಉತ್ತಮನಾದ ಯಾಜಕನಾಗಿದ್ದಾನೆ (7:7-12).

ಏಕೆ ಕ್ರಿಸ್ತನು ಉತ್ತಮವಾದ ಮಹಾಯಾಜಕನಾಗಿರುವನು? ಏಕಂದರೆ ಆತನು ಪರಿಶುದ್ಧನೂ ಹಾಗೂ ನಿಷ್ಕಳಂಕನೂ ಆಗಿದ್ದಾನೆ (7:26, 27, 4:15). ಆತನು ಒಂದೇ ಸಾರಿ ತನ್ನನ್ನು ಯಜ್ಞವಾಗಿ ಸಮರ್ಪಿಸಿದನು (7:27). ಆಣೆಯ ಮೂಲಕವಾಗಿ ಆತನು ನಮ್ಮ ಪರವಾದ ಮಹಾಯಾಜಕನಾದನು (7:28). ಆತನು ಸದಾಕಾಲ ಇರುವ ಯಾಜಕತ್ವವನ್ನು ಹೊಂದಿರುವನು (7:23-25).

*ಉತ್ತಮವಾದ ಒಡಂಬಡಿಕೆ.*[2] ಈ ದಿನಗಳಲ್ಲಿ ನಾವುಗಳು ಉತ್ತಮವಾದ ಒಡಂಬಡಿಕೆಗೆ ಒಳಪಟ್ಟಿದ್ದೇವೆ (8:6; 7:22). ಹಳೆಯದಕ್ಕಿಂತಲೂ, ಹೊಸದು ಉತ್ತಮವೆಂದು ಇಬ್ರಿಯ ಪತ್ರಿಕೆ ತಿಳಿಸುತ್ತದೆ. ಹಳೆಯದು ದೋಷವುಳ್ಳದ್ದಾಗಿರುವಲಿಂದ ನಾವುಗಳು ಹೊಸದನ್ನು ಪಡೆಯಬೇಕು ಎಂಬ ವಾದವನ್ನು ಇಬ್ರಿಯ ಬರಹಗಾರನು ಮಂಡಿಸಿರುವದರಿಂದ ಅದು ಹೇಗೆ ದೋಷವುಳ್ಳದ್ದಾಯಿತು? ಅದರ ನಿಯಮಗಳು ದೋಷವುಳ್ಳದ್ದಾಗಿದ್ದರೆ, ಅದರ ಯಜ್ಞಗಳು

ಪಾಪಗಳನ್ನು ನಿಜವಾಗಿ ಶಮನ ಮಾಡುತ್ತಿರಲಿಲ್ಲ. ಆದದರಿಂದ 8:8-12ರಲ್ಲಿ, ಬರಹಗಾರನು ಯೆರೆಮೀಯ 31:31-34ರ ವಾಕ್ಯವನ್ನು ಉಲ್ಲೇಖಿಸಿರುವನು. ಅದು ಹೊಸ ಒಡಂಬಡಿಕೆಯ ಪ್ರಕಾರ ನಿಯಮಗಳು ಹೃದಯದ ಹಲಿಗೆಗಳ ಮೇಲೆ ಬರೆದಿವೆಯೇ ಹೊರತು ಕಲ್ಲಿನ ಹಲಿಗೆಗಳ ಮೇಲೆ ಬರೆದಿರುವದಿಲ್ಲ. ದೇವರನ್ನು ಅರಿಯಿರಿ ಎಂದು ಯಾರೂ, ಯಾರಿಗೂ ಬೋಧಿಸುವ ಅಗತ್ಯವಿರುವದಿಲ್ಲ, ಪ್ರತಿಯೊಬ್ಬರು ಆತನನ್ನು ಅರಿತಿರುವರು. "ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" ಎಂದು ದೇವರು ಹೇಳಿರುವನು (8:12).

ಹಳೆಯ ಯಜ್ಞಗಳ ಮೂಲಕ ಪಾಪ ಪರಿಹಾರ ಉಂಟಾಗುವದಿಲ್ಲ (10:4). ಆದರೆ ಹೊಸ ಒಡಂಬಡಿಕೆಯ ಯಜ್ಞವು ಪಾಪ ನಿವಾರಣೆ ಮಾಡುತ್ತದೆ! ಹಳೆಯ ಪ್ರಯೋಜನವಿಲ್ಲದ ಯಜ್ಞಗಳು "ಹಳೆಯ ಒಡಂಬಡಿಕೆಯನ್ನು" "ಮರಣದ ವಿಧಿ" ಎನ್ನಲಾಗಿದೆ (2 ಕೊರಿಂಥ 3:7). ಅದು "ನಿರ್ಭಲವು ನಿಷ್ಪ್ರಯೋಜನವೂ" ಆಗಿತ್ತು ಎಂದು ಕರೆಯಲಾಗಿದೆ (7:18, 19). ಕ್ರಿಸ್ತನ ಯಜ್ಞದ ಮೂಲಕ ಪಾಪಕ್ಷಮೆ ಇರುವದರಿಂದ, ಹೊಸ ಒಡಂಬಡಿಕೆಯು ಉತ್ತಮ ವಾಗಿದೆ.

*ಉತ್ತಮವಾದ ವಾಗ್ದಾನಗಳು.* ಹೊಸದು ಉತ್ತಮವಾದದ್ದೆ ಏಕೆಂದರೆ ಅದು ಉತ್ತಮವಾದ ವಾಗ್ದಾನಗಳನ್ನು ಹೊಂದಿರುತ್ತದೆ (8:6). ಹಳೆ ಒಡಂಬಡಿಕೆಯ ಸಮಯದಲ್ಲಿ ಜೀವಿಸಿದ್ದವರು, ಅದರ ಈಡೇರಿಕೆಯನ್ನು ಕಾಣಲಿಲ್ಲ (11:13; 11:39, 40). ಅವರು ಅದನ್ನು ಅಸ್ಪಷ್ಟವಾಗಿ ನೋಡಿದರೇ ಹೊರತು, ಅದನ್ನು ಸ್ವೀಕರಿಸಲಿಲ್ಲ. ಆದರೆ ನಾವುಗಳು ಅದನ್ನು ಸ್ಪಷ್ಟವಾಗಿ ಗಮನಿಸಿ, ಅದನ್ನು ಗಳಿಸುವ ಸಾಧ್ಯತೆಯಿದೆ. ಆ ಉತ್ತಮವಾದ ಹೊಸ ಒಡಂಬಡಿಕೆಯನ್ನು ನಾವುಗಳು ಆನಂದಿಸುತ್ತಿರುವೆವೇ? ಇಬ್ರಿಯ 8:12ರ, ಪ್ರಕಾರ ಹಳೆ ಒಡಂಬಡಿಕೆಯ ಜನರಿಗೆ ದೊರೆಯದ ಪಾಪಕ್ಷಮೆಯನ್ನು ನಾವುಗಳು ಹೊಂದಿದ್ದೇವೆ. ಕ್ರಿಸ್ತನ ಮರಣದ ನಿಮಿತ್ತವಾಗಿ, "ನಿತ್ಯಬಾದ್ಯತೆಯನ್ನು ಹೊಂದಿದ್ದೇವೆ" (9:15).

*ಉತ್ತಮ ಮಾತುಗಾರರು.* ಈ ಯುಗದಲ್ಲಿ ಉತ್ತಮವಾದ ಮಾತುಗಾರರಿದ್ದಾರೆ. ಇಬ್ರಿಯ 1:1, 2 ದೇವರಿಗಾಗಿ ಮಾತನಾಡಿದ ದೇವರ ಮಗನಿಗೂ ಮತ್ತು ಮೊದಲ ಒಡಂಬಡಿಕೆಯ ಕಾಲದ ಪ್ರವಾದಿಗಳ ನಡುವಿನ ವ್ಯತ್ಯಾಸವನ್ನು ತಿಳಿಸಲಾಗಿದೆ. ಆತನು ದೇವದೂತರಿಗಿಂತಲೂ ಉತ್ತಮನಾದ ಪ್ರವಾದಿಯಾಗಿರುವನು (1:4), ಆತನ ಮೂಲಕ ಮೋಶೆಯ ನಿಯಮಗಳನ್ನು ಈಡೇರಿಸಲಾಯಿತು (2:2); ಆತನು ಮೋಶೆಗಿಂತಲೂ ಶ್ರೇಷ್ಟನು (3:3-6).

*ಉತ್ತಮವಾದ ನಿರೀಕ್ಷೆ,* ಈ ಯುಗದಲ್ಲೂ ನಾವುಗಳು ಉತ್ತಮವಾದ ನಿರೀಕ್ಷೆ ಯನ್ನು ಹೊಂದಿದ್ದೇವೆ (7:19). ನಮ್ಮ ನಿರೀಕ್ಷೆಯು ಏಕೆ ಉತ್ತಮವಾಗಿದೆ? ಬಹುಶಃ ಅದು "ತೆರೆಯೊಳಗಣ ದೇವ ಸಾನಿಧ್ಯವನ್ನು ಪ್ರವೇಶಿಸಿರುವದರಿಂದಲೇ" (6:18-20). ನಮ್ಮ ನಿರೀಕ್ಷೆಯಲ್ಲಿ ಪರಲೋಕದ ಪ್ರತಿಫಲವಿದೆ. ಹಳೆ ಒಡಂಬಡಿಕೆಯ ಜನರು ಯಾವ ವಿಧವಾದ ನಿರೀಕ್ಷೆಯನ್ನು ಹೊಂದಿದ್ದರು? ಅವರ ನಿರೀಕ್ಷೆಯು ಪರಲೋಕದ್ದಾಗಿರದೆ, ಲೋಕಕ್ಕೆ ಸಂಬಂಧಪಟ್ಟಿತ್ತು. ಕೆಲವು ಸಾರಿ ಮಾತ್ರ ದೇವರಿಗೆ ಸಂಬಂಧಪಟ್ಟ ನಿತ್ಯ ಜೀವವನ್ನು ಕಾಣುತ್ತಿದ್ದರು (11:16, 35), ಆದರೆ ಅದು ಅವರಿಗೆ ಮಸಕಾಗಿತ್ತು; ಆದರೆ ನಾವುಗಳು ಪರಲೋಕದ ವಾಗ್ದಾನಗಳನ್ನು ಸ್ಪಷ್ಟವಾಗಿ ಕಾಣುತ್ತಿದ್ದೇವೆ. "ನಮಗೆ ಸ್ಥಿರವಾದ ಆಸ್ತಿಯುಂಟು" (10:34) - ಹಾಗೂ ಪರಲೋಕದ ಪ್ರತಿಫಲವಿದೆ.

*ಉತ್ತಮವಾದ ಯಜ್ಞ.* ಉತ್ತಮವಾದ ಯಜ್ಞಗಳ ಮೂಲಕ ಹೊಸ ಒಡಂಬಡಿಕೆಯು ಸ್ಥಾಪಿತವಾಗಿದೆ (9:23). ಇಬ್ರಿಯ 9:13, 14 ರಲ್ಲಿ, ಯಜ್ಞಗಳು ಬಾಹಿರವಾದ ದೋಷವನ್ನು ನಿವಾರಣೆ ಮಾಡಿದವು, ಅಂದರೆ ಸಾಂಪ್ರಾದಾಯಿಕ ಶುದ್ಧತೆಯನ್ನು ಮಾತ್ರ ಮಾಡಿದವು. ಆದರೆ ಯೇಸುವಿನ ರಕ್ತವು ನಮ್ಮ ಮನಸ್ಸಾಕ್ಷಿಯನ್ನು ಶುದ್ಧಮಾಡಿ ಪಾಪ ಕ್ಷಮಾಪಣೆಯನ್ನು ನೀಡುತ್ತದೆ. ಹೊಸ ಒಡಂಬಡಿಕೆಯ ಯಜ್ಞವು ಪಾಪ ನಿವಾಣೆಯನ್ನು ಮಾಡಿರುವದರಿಂದ, ಅದು ಉತ್ತಮವಾಗಿದೆ (9:13, 14; 10:4, 14). ಆದುದರಿಂದ ಅದನ್ನು ಒಂದೇ ಬಾರಿ

ಅರ್ಪಿಸಲಾಯಿತು (7:27; 9:25, 26; 12:24).

*ಉತ್ತಮವಾದ ದೇವದರ್ಶನದ ಗುಡಾರ.* ಕ್ರೈಸ್ತರ ಯುಗದಲ್ಲಿ, ದೇವರೇ ನಿರ್ಮಿಸಿರುವ ಉತ್ತಮವಾದ ಗುಡಾರವಿದೆ. ಅದನ್ನು ಮನುಷ್ಯನು ನಿರ್ಮಿಸಿರುವದಿಲ್ಲ (8:2, 5; 9:11, 24; 10:1). ಹಳೆಯ ಗುಡಾರವು "ನಿಜವಾದ ಗುಡಾರದ" ಛಾಯೆಯಾಗಿತ್ತು. ಈ ದಿನಗಳಲ್ಲಿ ಸಭೆಯೇ ಉತ್ತಮವಾದ ಗುಡಾರವಾಗಿದ್ದು, ದೇವ ಜನರು ಅಲ್ಲಿ ಆರಾಧಿಸುತ್ತಾರೆ.

## ಹೊಸ ಒಡಂಬಡಿಕೆಯ ಕುರಿತು ನಾವುಗಳು ಏನೆಂದು ಅರ್ಥಮಾಡಿಕೊಂಡಿದ್ದೇವೆ?

*ಹಳೆ ಒಡಂಬಡಿಕೆಯ ನಿರ್ಮೂಲನೆ.* ನಾವುಗಳು ಹೊಸದಾದ, ಉತ್ತಮವಾದ ಒಡಂಬಡಿಕೆಯನ್ನು ಹೊಂದಿರುವಾಗ ಹಳೆಯದು ಇಲ್ಲವಾಗಿದೆ. 8:13ರಲ್ಲಿ, ಈ ಎರಡರ ನಡುವಿನ ವ್ಯತ್ಯಾಸವನ್ನು ಬರಹಗಾರನು ವಿವರಿಸಿರುವನು ಇಲ್ಲಿ ಹೊಸ ಒಡಂಬಡಿಕೆಯೆಂದು ಹೇಳಿದ್ದರಲ್ಲಿ ಮೊದಲಿದದ್ದನು. ಹಳೇದಾಗಿ ಮಾಡಿದ್ದಾನೆ. ಆದರೆ ಹಳೆಯದಾದದ್ದು ಕಾಣದಾಗುವ ಹಂತವನ್ನು ತಲುಪುತ್ತದೆ. ಕ್ರಿಸ್ತನಿಗಿಂತ ಮೊದಲು ಐನೂರು ವರ್ಷಗಳ ಹಿಂದೆ ಯೆರೆಮೀಯನು, ಹಳೆಯದು ನಿರ್ಮೂಲವಾಗುತ್ತದೆ ಎಂದು ಬರೆದಿರುವನು. ಹೊಸ ಒಡಂಬಡಿಕೆಯನ್ನು ಬರೆದು, ತಮ್ಮ ಸಮಯದಲ್ಲಿಯೇ ಅದು ಇಲ್ಲದಾಯಿತು ಎಂದು ತಿಳಿದರು (ಉದಾಹರಣೆ ಇಬ್ರಿಯ 7:11, 12). ಆದ್ದರಿಂದ ಹಳೆ ನಿಯಮಗಳನ್ನು ನಮಗೆ ಅಳವಡಿಸಿಕೊಳ್ಳಬಾರದು ಹಾಗೂ ಹಳೆಯ ಒಡಂಬಡಿಕೆಯ ಪ್ರಕಾರವಾಗಿ ನಮ್ಮ ಧರ್ಮವನ್ನು ಸಿದ್ಧಾಂತ ಪಡಿಸಲುಯತ್ನಿಸಬಾರದು.

*ನಂಬಿಗಸ್ತರಾಗಿರುವದಕ್ಕೆ ಪ್ರೋತ್ಸಾಹ.* ನಾವು ಹೊಸ ಒಡಂಬಡಿಕೆಗೆ ಒಳಪಟ್ಟಿರುವದರಿಂದ ಕೃತಜ್ಞರಾಗಿರಬೇಕು. ಇಬ್ರಿಯ ಬರಹಗಾರನು ತನ್ನ ಓದುಗರು ನಂಬಿಗಸ್ತರಾಗಿರಬೇಕು ಎಂದು ಬಯಸಿದನು. ಆ ಉತ್ತಮವಾದ ಒಡಂಬಡಿಕೆಯಿಂದಲೇ ಅವರಿಗೆ ಆಶೀರ್ವಾದವಾಯಿತು ಎಂದು ಅವರುಗಳು ಹೇಳಲು ಇಚ್ಛಿಸಿದನು. ನಾವುಗಳು ಸಹ ಉತ್ತಮವಾದ ನಿಯಮಕ್ಕೆ ಒಳಪಟ್ಟಿರುವದರಿಂದ ಪ್ರೋತ್ಸಾಹಗೊಂಡು ನಂಬಿಗಸ್ತರಾಗಿರಬೇಕು. ಹಳೆ ಒಡಂಬಡಿಕೆಯು ಬಯಸುವದಕ್ಕಿಂತಲೂ, ಹೆಚ್ಚಿನ ಕೃತಜ್ಞತೆವುಳ್ಳವರಾಗಿರಬೇಕು.

*ಶಿಕ್ಷೆಯ ಸಾಧ್ಯತೆಗಳಿವೆ.* ವಿಶೇಷ ಆಶೀರ್ವಾದವು ವಿಶೇಷ ಹೊಣೆಯನ್ನು ಹೊಂದಿರುತ್ತದೆ ಎಂಬುದನ್ನು ನಾವುಗಳು ಅರಿಯಬೇಕು. ಹೊಸ ಒಡಂಬಡಿಕೆಗೆ ವಿಧೇಯರಾಗದೆ ಹೋದರೆ, ಹಳೆ ಒಡಂಬಡಿಕೆಯ ಅವಿಧೇಯತೆಗೆ ಉಂಟಾಗುವ ಶಿಕ್ಷೆಗಿಂತ ಅಧಿಕವಾದ ಶಿಕ್ಷೆಗೆ ಒಳಗಾಗುತ್ತೇವೆ (10:26-29; 2:2, 3).

## ಮುಕ್ತಾಯ

ಮೋಶೆಯ ಧರ್ಮಶಾಸ್ತ್ರವು, ತನ್ನನ್ನು ಪಾಲಿಸುವವರೆ ವಿಶೇಷ ಭಕ್ತಿ ಹಾಗೂ ಸಮರ್ಪಣೆಯನ್ನು ಹೊಂದಿರಬೇಕು ಎಂದು ತಿಳಿಸಿತು; ಆದರೆ ಅವರಲ್ಲಿ ಅನೇಕರು ಒಡಂಬಡಿಕೆಯ ದೇವರನ್ನು ಅನುಸರಿಸಲು ನಿರಾಕರಿಸಿ ಅಥವಾ ಇಸ್ರಾಯೇಲ್ಯರಿಗೆ ನೀಡಿದ್ದ ನಿಯಮವನ್ನು ಉಲ್ಲಂಘಿಸಿದ್ದರಿಂದ ಸತ್ತುಹೋದರು (11:32-38). ಕೆಳ ಮಟ್ಟದ ಒಡಂಬಡಿಕೆಯು ವಿಶೇಷ ವಾದ ಸಮರ್ಪಣೆಯನ್ನು ತನ್ನ ಜನರಿಂದ ಬಯಸುವದಾದರೆ, ನಾವುಗಳು ಒಳಪಟ್ಟಿರುವ ಹೊಸ ಒಡಂಬಡಿಕೆಯು ಎಷ್ಟು ಹೆಚ್ಚಾದ ಸಮರ್ಪಣೆಯನ್ನು ಬಯಸುತ್ತದಲ್ಲವೇ!

---

ಟಿಪ್ಪಣಿಗಳು

[1]ನಿಯಮದ ಪ್ರಕಾರ ಮುಯ್ಯಿತೀರಿಸಬಾರದು, ಸಹೋದರನನ್ನು ದ್ವೇಷಿಸಬಾರದು (ಯಾಜಕ 19:17, 18). [2]ಹೊಸ ಒಡಂಬಡಿಕೆಯು, ಹಳೆಯದಕ್ಕಿಂತ ಉನ್ನತ ಮಟ್ಟದ್ದಾಗಿದೆ (12:18-24).